ದಿ. 15.09.2016 ರಂದು ಸಾಕ್ಷಿಯನ್ನು ಮತ್ತೆ ಕರೆಸಿ ಪ್ರಮಾಣಬೋದಿಸಲಾಯ್ತು.

ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ

ಸಾಕ್ಷಿಗೆ ನ್ಯಾಯಾಲಯದ ಮುಂದಿರುವ ಮು.ಮಾ. 6 ಮತ್ತು 7 ಲಾಂಗ್ ಮತ್ತು ಚಾಕುವನ್ನು ತೋರಿಸಲಾಗಿ ಆ ಆಯುಧಗಳಿಂದಲೇ ಮಂಜುನಾಥನನ್ನು ಹೊಡೆದಿರುವುದು ಎಂದು ಗುರ್ತಿಸಿದ್ದಾರೆ . ಮಂಜುನಾಥನನ್ನು ಓಡಿಸಿಕೊಂಡು ಹೋಗಿ ಹೊಡೆದಿರುವವರನ್ನು ನೋಡಿದರೆ ಗುರ್ತಿಸುತ್ತೇನೆ . ನನಗೆ ರಂಜಿತಾ , ಸಂದೀಪ್ ಮತ್ತು ನಾಗರಾಜು ಇವರುಗಳನ್ನು ಆರೋಪಿಗಳಲ್ಲಿ ಗುರ್ತಿಸಲು ಆಗುತ್ತದೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಗಳಲ್ಲಿ ಮೊದಲು ಆರೋಪಿಯಾದ ಸಂದೀಪನನ್ನು ರಂಜಿತ್ ಎಂದು ಗುರ್ತಿಸಿ ನಂತರ ಆ ಆರೋಪಿಯ ಹೆಸರು ಸಂದೀಪ್ ಎಂದು ಗುರ್ತಿಸಿದ್ದಾರೆ . ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಗಳಾದ ರಂಜಿತ್ ಮತ್ತು ಸಂದೀಪ್ ನನ್ನು ಗುರ್ತಿಸಿದ್ದಾರೆ . ಆರೋಪಿಯಾದ ನಾಗರಾಜನನ್ನು ಗುರ್ತಿಸಲು ಈಗ ನೆನಪಾಗುತ್ತಿಲ್ಲ . ಮಂಜುನಾಥನನ್ನು ಓಡಿಸಿಕೊಂಡು ಹೋದವರು ಸುಮಾರು 10-11 ಜನರು ಇದ್ದರು . ನ್ಯಾಯಾಲಯದ ಮುಂದಿರುವ ಆರೋಪಿಗಳಲ್ಲಿಯೇ ಆ ಜನರು ಇದ್ದು , ಅವರು ಯಾರ್‍ಯಾರು ಎಂದು ನನಗೆ ಹೇಳಲು ನೆನಪಾಗುತ್ತಿಲ್ಲ .

ಪಾಟೀ ಸವಾಲುಃ ಆರೋಪಿಗಳ ಪರ ವಕೀಲರು ಚಾ.ಸಾ. 15 ರವರ ಮುಖ್ಯ ವಿಚಾರಣೆಯು ಆದ ನಂತರ ಪಾಟೀ ಸವಾಲನ್ನು ಮಾಡುವುದಾಗಿ ಅರ್ಜಿಯನ್ನು ಸಲ್ಲಿಸಿದ್ದು, ಆ ಅರ್ಜಿಯನ್ನು ಪುರಸ್ಕರಿಸಿ ಪಾಟೀ ಸವಾಲನ್ನು ಮುಂದೂಡಲಾಯ್ತು .

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)

ಓ ಹೇ ಕೇ ಸರಿ ಇದೆ ಎಂದು ನುಡಿದಿದ್ದಾರೆ.

(ಬಿ.ವಿ. ರೇಣುಕ)
2ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.